# ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ಅಧೀಕ್ಷಕ ಅಭಿಯಂತರರು(ವಿ)
ಕಾ ಮತ್ತು ಪಾ ವೃತ್ತ, ಕೇಶ್ವಾಪೂರ, ಹುಬ್ಬಳ್ಳಿ-23
Tel: 0836-2364144, Fax: 0836-2366184

Superintending Engineer(Ele)
O & M Circle, Keshwapur, Hubballi-23
E-mail ID: seehbl.hescom@gmail.com

Corporate Identity Number (CIN) : U31401KA2002SGC030437


## ಗ್ರಾಹಕರ ಕುಂದುಕೊರತೆಗಳ ನಿವಾರಣ ವೇದಿಕೆ

ಕಾರ್ಯ ಮತ್ತು ಪಾಲನೆ ವೃತ್ತ, ಹೆಸ್ಕಾಂ, ಹುಬ್ಬಳ್ಳಿ, ಧಾರವಾಡ ಜಿಲ್ಲೆ

**ಪ್ರಕರಣ ಸಂಖ್ಯೆ:270/2023**

**ವೇದಿಕೆಯ ಸದಸ್ಯರು:**

ಶ್ರೀಮತಿ **ಶರಣಮ್ಮ ಎಸ್ ಜಂಗಿನ,** ಅಧೀಕ್ಷಕ ಇಂಜಿನೀಯರ(ವಿ) ಕಾ ಮತ್ತು ಪಾ ವಲಯ ಕಚೇರಿ ಹೆಸ್ಕಾಂ ಹುಬ್ಬಳ್ಳಿ ಹಾಗೂ ವೇದಿಕೆಯ ಅಧ್ಯಕ್ಷರು.

ಶ್ರೀ **ರೇವಣಸಿದ್ದಪ್ಪ ಗವಣ್ಣವರ,** ಉಪಲೆಕ್ಕ ನಿಯಂತ್ರಣಾಧಿಕಾರಿ ಕಾ ಮತ್ತು ಪಾ ವೃತ್ತ, ಹೆಸ್ಕಾಂ, ಹುಬ್ಬಳ್ಳಿ ಹಾಗೂ ವೇದಿಕೆಯ ಸದಸ್ಯರು.

ಶ್ರೀಮತಿ, **ಲೀಲಾ ಆರ್ ಹಿರೇಮಠ,** ವಕೀಲರು, ಆಯೋಗದಿಂದ ನಿಯೋಜಿಸಲಾದ ಸದಸ್ಯರು.

ಶ್ರೀ ವೈಜೇಶ ಆರ್ ಉಚಿಲಾ,
[I.D. No :1900876163]
C/o ತುಷಾರ ಎಂ ಬದ್ದಿ,
ಅರಿಹಂತ ಪಾರ್ಕ,
ಕೇಶ್ವಾಪೂರ ಹುಬ್ಬಳ್ಳಿ-580023 ..............**ದೂರುದಾರರು.**

**ವಿರುದ್ಧ,**

ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ)
ಕಾ ಮತ್ತು ಪಾ ಶಹರ ಉಪ ವಿಭಾಗ-1,
ಹೆಸ್ಕಾಂ, ಧಾರವಾಡ. ..................**ಪ್ರತಿವಾದಿಗಳು.**

**ಪೀಠಿಕೆ:**

1. I.D.No-1900876163, ಶ್ರೀ ವೈಜೇಶ ಆರ್ ಉಚಿಲಾ, ಅನಂತ ಲೇಔಟ್, ಪಿ.ಬಿ. ರೋಡ, ನವಲೂರ ಧಾರವಾಡ ಇವರ ಬಹುಮಹಡಿ ಕಟ್ಟಡಕ್ಕೆ 60 ಕಿ.ವ್ಯಾ ವಿದ್ಯುತ್ ಮಂಜೂರಾತಿಯೊಂದಿಗೆ 17 ಸ್ಥಾವರಗಳಿಗೆ ವಿದ್ಯುತ್ ಮಂಜೂರಾತಿಯನ್ನು ಪಡೆದಿದ್ದು, ಲೈಸನ್ಸುದಾರರು ಸದರಿ ಬಹುಮಡಿ ಕಟ್ಟಡದ 4 ನೇ ಅಂತಸ್ಥಿಗೆ ವಿದ್ಯುತ್ ಸಬರಾಜು ಮಾಡಿರುವುದಿಲ್ಲವೆಂದು ಹಾಗೂ ಸದರಿ ವಿದ್ಯುತ್ ಸರಬರಾಜು ಮಾಡಲು ವಿಳಂಭವಾದ 183 ದಿನಗಳಿಗೆ KERC (Standards of Performance) Regulations, 2022 ರಂತೆ ರೂ.36,600/-ಗಳ ಸತ್ವಾಂನ ಮೊತ್ತವನ್ನು ಗ್ರಾಹಕರಿಗೆ ಪಾವತಿಸುವಂತೆ ಹಾಗೂ ಲೈಸನ್ಸುದಾರರ ಮೇಲೆ ಕಠಿಣ ಕ್ರಮ ಜರುಗಿಸಿ, ನ್ಯಾಯಯುತ ಆದೇಶವನ್ನು ನೀಡಬೇಕೆಂದು ಗ್ರಾಹಕರ ಪರವಾಗಿ ಶ್ರೀ ತುಷಾರ ಎಂ ಬದ್ದಿರವರು ದಿನಾಂಕ:13-01-2023 ರಂದು ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆಗೆ 'ಎ' ನಮೂನೆಯೊಂದಿಗೆ ಅರ್ಜಿ ಸಲ್ಲಿಸಿರುತ್ತಾರೆ.
2. ಶ್ರೀ ವೈಜೇಶ ಆರ್ ಉಚಿಲಾ, ಇವರು ಸ್ಥಾವರದ I.D.No-1900876163 ದಿನಾಂಕ:31-07-2021 ರಂದು ಬಹುಮಹಡಿ ಕಟ್ಟಡಕ್ಕೆ ವಿದ್ಯುತ್ ಮಂಜೂರಾತಿಗೆ ಕಾ ಮತ್ತು ಪಾ ಶಹರ ಉಪ ವಿಭಾಗ-1 ರಲ್ಲಿ ಅರ್ಜಿ ನೊಂದಾಯಿಸಿದ್ದು, ಎಚ್ ಡಿ ಎಮ್ ಸಿ ರವರಿಂದ ಕಟ್ಟಡಕ್ಕೆ ಜಿ+3 ಸಂರಚನೆಗೆ ಅನುಮೊದನೆ ಪಡೆದುಕೊಂಡಿರುವ ಪ್ರಕಾರ ಅಧೀಕ್ಷಕ ಇಂಜಿನೀಯರ(ವಿ), ಕಾ ಮತ್ತು ಪಾ ವೃತ್ತ ಹೆಸ್ಕಾಂ, ಹುಬ್ಬಳ್ಳಿರವರು ಶ್ರೀ ವೈಜೇಶ ಆರ್ ಉಚಿಲಾರವರ ಜಿ+3 ಸಂರಚನೆಯ ವಸತಿ ಕಟ್ಟಡಕ್ಕೆ 17 ಸ್ಥಾವರಗಳಿಗೆ 60 ಕೆ.ವಿ.ಎ ವಿದ್ಯುತ್ ಮಂಜೂರಾತಿಯನ್ನು ನೀಡಿರುತ್ತಾರೆ. ಗ್ರಾಹಕರು ವಿದ್ಯುತ್ ಸಮಗ್ರಿಗಳನ್ನು ಜುಲೈ 2022 ರಂದು ಖರಿಧೀಸಿ ಕಾಮಗಾರಿಯನ್ನು ದಿನಾಂಕ:15-8-2022 ರಂದು ಪೂರ್ಣಗೊಳಿಸಿದ್ದಾರೆ. ಆದರೆ ಗ್ರಾಹಕರು ಜಿ+4 ಸಂರಚನೆಯ ಕಟ್ಟಡವನ್ನು ನಿರ್ಮಿಸಿದರಿಂದ ವಿದ್ಯುತ್ ಪರಿವಿಕ್ಷಕರ ಧಾರವಾಡರವರು ಕಟ್ಟಡಕ್ಕೆ ವಿದ್ಯುತ್ ಪೂರೈಸಲು ಶರತ್ತುಬದ್ದ ಅನುಮೋದನೆಯನ್ನು

.......2

(ಕಟ್ಟಡದ ಜಿ+3 ಸ್ಥಾವರಗಳಿಗೆ ಮಾತ್ರ ವಿದ್ಯುತ್ ಸರಬರಾಜು ಮಾಡಲು ಸುರಕ್ಷತಾ ಅನುಮೋದನೆಯನ್ನು) ದಿನಾಂಕ:19-08-2022 ರಲ್ಲಿ ನೀಡಿರುತ್ತಾರೆ. ವಿದ್ಯುತ್ ಪರಿವಿಕ್ಷಕರ ಧಾರವಾಡರವರಿಗೆ ಷರತ್ತುಗಳ ಸ್ಪಷ್ಟನೆಯನ್ನು ಕೋರಿ ದಿನಾಂಕ:03-11-2022 ರಂದು ನಮ್ಮ ಕಛೇರಿಯಿಂದ ಪತ್ರ ಸಲ್ಲಿಸಲಾಗಿರುತ್ತದೆ. ವಿದ್ಯುತ್ ಪರಿವಿಕ್ಷಕರು ದಿನಾಂಕ:8-11-2022 ರಂದು ನಮ್ಮ ಹಂತದಲ್ಲಿಯೆ ಕಟ್ಟಡಕ್ಕೆ ವಿದ್ಯುತ್ ಪೂರೈಸಲು ನಿರ್ಧಾರ ತಗೆದುಕೋಳ್ಳಲು ಸೂಚಿಸಿರುತ್ತಾರೆ. ಆದ್ದರಿಂದ ಶಾಖಾಧಿಕಾರಿ ಸತ್ತೂರವರಿಗೆ ಜಾಯಿಂಟ ಇನ್‌ವೆಂಟ್ರಿಯನ್ನು ಉಪ ವಿಭಾಗಕ್ಕೆ ಸಲ್ಲಿಸಲು ಮತ್ತು ಕಟ್ಟಡದ ನಾಲ್ಕನೇ ಅಂತಸ್ತಿಗೆ ಹೆಚ್ ಡಿ ಎಂ ಸಿ ಅವರದಿಂದ ಅನುಮೋದನೆ ಇಲ್ಲದ ಕಾರಣ ಗ್ರಾಹಕರಿಗೆ ಇಂಡಿಮಿನಿಟಿ ಬಾಂಡ್ ಸಲ್ಲಿಸಲು ಲೈಸನ್ಸುದಾರರು ಗ್ರಾಹಕರಿಗೆ ಸೂಚಿಸಲಾಗಿದ್ದಿರುತ್ತದೆ.

3. ಕಾ ಮತ್ತು ಪಾ ನಗರ ವಿಭಾಗ ಧಾರವಾಡರವರ ಕಚೇರಿಯಿಂದ 07-12-2022 ರಂದು preamble ಆದ ಮೇಲೆ ಕಟ್ಟಡದ ವೈಯುಕ್ತಿಕ ಮನೆಗಳಿಗೆ ಗ್ರಾಹಕರು 08-12-2022 ರಂದು ನೊಂದಣಿ ಮಾಡಿರುತ್ತಾರೆ ಪವರ್ ಸ್ಯಾಂಕ್ಷನ್‌ವನ್ನು 15-12-2022 ರಂದು ನೀಡಿದ್ದು, ಗ್ರಾಹಕರು 22-12-2022 ರಂದು ಡಿಪೋಸಿಟ್ ಮೊತ್ತವನ್ನು ತುಂಬಿರುತ್ತಾರೆ. ಮುಂದುವರೆದು 22-12-2022 ರಂದು ಕಾ & ಪಾ ಶಹರ ಉಪ ವಿಭಾಗ-1 ಧಾರವಾಡದಲ್ಲಿ ವೈಯುಕ್ತಿಕ ಮನೆಗಳೀಗೆ ಕೆಲಸದ ಆದೇಶ ಹಾಕಿರುತ್ತಾರೆ. ಗ್ರಾಹಕರು ಕೆ.ಇ.ಆರ್.ಸಿ. 10 ನೇ ತಿದ್ದುಪಡಿ ಪ್ರಕರಾರ ಅನಧಿಕೃತ ಕಟ್ಟಡಗಳಿಗೆ ಕಡಿವಾಣ ಹಾಕಲು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳು ಆಯಾ ಕಾಯ್ದೆಗಳ ಅಡಿಯಲ್ಲಿ ಕ್ರಮ ತೆಗೆದುಕೊಳ್ಳಬೇಕು ಮತ್ತು ಅನಧಿಕೃತ ಕಟ್ಟಡಗಳಿಗೆ ವಿದ್ಯುತ್ ಸರಬರಾಜು ಮಾಡಬೇಕು ಎಂದು ಹೇಳಿರುತ್ತಾರೆ. ಆದರೆ **ಕೆ.ಇ.ಆರ್.ಸಿ 10 ನೇ ತಿದ್ದುಪಡಿ ಪ್ರಕಾರ ಅನಧಿಕೃತ ಕಟ್ಟಡಗಳಿಗೆ ವಿದ್ಯುತ್ ಪರಿವೀಕ್ಷಕರ ಅನುಮೊದನೆಯನ್ನು ಪಡೆದೆ ವಿದ್ಯುತ್ ಸರಬರಾಜು ಮಾಡಬೇಕೆಂದು ಷರತ್ತು ಇರುತ್ತದೆ.** ಗ್ರಾಹಕರು ಎಚ್.ಎಮ್.ಸಿ.ರವರಿಂದ ಕಟ್ಟಡಕ್ಕೆ ಜಿ+3 ಸಂರಚನೆಗೆ ಅನುಮೊದನೆ ಪಡೆದುಕೊಂಡು ಅನಧಿಕೃತವಾಗಿ ಜಿ+4 ಸಂರಚನೆಯ ಕಟ್ಟಡವನ್ನು ನಿರ್ಮಿಸಿದ್ದರಿಂದ ಮತ್ತು ಜಿ+4 ಸಂರಚನೆಗೆ ವಿದ್ಯುತ್ ಪರಿವೀಕ್ಷಕರ ಅನುಮೊದನೆ ಇಲ್ಲದಿರುವ ಕಾರಣ ಮತ್ತು ಅಧಿಕ್ಷಕ ಇಂಜಿನೀಯರ(ವಿ)ರವರು ಕಟ್ಟಡದ ಜಿ+3 ಸಂರಚನೆಗೆ ಮಂಜುರಾತಿ ನೀಡಿದ್ದರಿಂದ ಗ್ರಾಹಕರಿಗೆ ವಿದ್ಯುತ್ ಸರಬರಾಜು ಮಾಡಲು ವಿಳಂಭವಾಗಿರುತ್ತದೆ. ಇದರಲ್ಲಿ ಯಾವುದೇ ವೈಯುಕ್ತಿಕ ಕಾರಣ ಇರುವುದಿಲ್ಲವೆಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾ ಮತ್ತು ಪಾ ಶಹರ ಉಪ ವಿಭಾಗ-2 ಹೆಸ್ಕಾಂ, ಧಾರವಾಡರವರು ದಿನಾಂಕ:10-02-2023 ರಲ್ಲಿ ವೇದಿಕೆಗೆ ವಿನಂತಿಸಿಕೊಂಡಿರುತ್ತಾರೆ.

4. ಸದರ ಪ್ರಕರಣವನ್ನು ದಿನಾಂಕ: 10-02-2023 ರಂದು ವಿಚಾರಣೆಯನ್ನು ನಡೆಸಲಾಯಿತು. ಆಗ ಈ ಕೆಳಗಿನವರು ಹಾಜರಿದ್ದರು.

| ಗ್ರಾಹಕರ ಪರವಾಗಿ | ನಿಗಮದ ಪರವಾಗಿ |
|---|---|
| ಶ್ರೀ ತುಷಾರ ಬದ್ದಿ | ಶ್ರೀ ಮಂಜುನಾಥ ಟಂಗರಿಕರ್<br>ಸ.ಕಾ.ನಿ.ಇಂ(ವಿ)<br>ಕಾ ಮತು ಪಾ ಶಹರ ಉಪ ವಿಭಾಗ-1, ಧಾರವಾಡ |

**ಗ್ರಾಹಕರ ಪರವಾಗಿ ಶ್ರೀ ತುಷಾರ ಎಂ ಬದ್ದಿ, ಹುಬ್ಬಳ್ಳಿ ಇವರ (ಎ) ಫಾರ್ಮನೋದಿಗೆ ಸಲ್ಲಿಸಿದ ಲಿಖಿತ ಹೇಳಿಕೆ ಈ ಕೆಳಗಿನಂತಿರುತ್ತದೆ:**

## STATEMENT OF OBJECTIONS

filed by Shri Vaijesh R Uchila, through his Authorised Representative
Shri Tushar M Baddi R/o HUBBALLI

***

## BRIEF FACTS

On going through the record the issue is elaborated as under:

1. That the an application seeking power supply to the premises located at survey no. 171/C, Door No. 6/43652, Ananth Layout, P.B. Road, Navalur, Dharwad to the tune of 60KW for 17 Nos of Residential Installation with all the property documents as prescribed in the KERC Conditions of Supply was put forth before the Respondent Licensee on 31.07.2021.
2. That on verifying the records the application was registered vide ID No. 1900876163 on 31.07.2021 and the proposed application was forwarded to the concerned Section Officer, Sattur Unit, Dharwad for submitting the field report.

.......3

3. That on going through the record the Executive Engineer (Ele.) Urban Division, HESCOM, Dharwad has deliberately forwarded the application to the Superintendent Engineer (Ele.) O&M Circle, HESCOM, Hubballi on 31.10.2021 for necessary approval even though the power of sanctioning the aforesaid application is delegated to the Executive Engineer (Ele.) as per the Manual Delegation of Financial Powers-2007 amended on 22.07.2021. *(emphasis supplied).*
4. That on 12.11.2021 the Superintendent Engineer (Ele.) O&M Circle, HESCOM, Hubballi issued a power sanction letter ltr No. HESCOM/SEE/EEE(O)/AEE/F-2/21-22/4024-26 dated 12.11.2021 for 17 Nos of Residential Installations with 60KW more specifically to 4 Floors (GF+FF+SF+TF).
5. That on 03.12.2021 the Executive Engineer (Ele.) Urban Division, HESCOM, Dharwad issued a work award vide letter No.424/U.Dn/EE(E)/AEE(O)/ 2021-22/5884-86 dated 03.12.2021 to execute the work such as installation of Electrical Transformer and other allied equipments.
6. That after completion of physical work application was put forth by the applicant before the Electrical Inspectorate; Dharwad on 08.08.2022 and accordingly approval was obtained vide Ltr No. ACEI/DWD/EI/F-066-TCLTMSB/1734/2022-23 dtd. 19.08.2022 wherein the Electrical Inspectorate has specifically stated that the approval is issued to 4 Floors (GF+FF+SF+TF) as under: "*Separate approval shall be obtained for proposed fourth floor after completion and approved from competent Authority and it shall be energized after the approval.*"
7. That on 20.08.2022 as per the statutory provision the inventory file alongwith the approval of the Electrical Inspectorate; Dharwad & the material purchase bills were submitted before the Section Officer, Sattur Unit, Dharwad where his duty mandates him to conduct a joint inspection to the work site and take an inventory of the materials and forward the same to the next higher Authority i.e. The Asst Executive Engineer (Ele.) for further approval.
8. That on going through the record it is learnt that the Section Officer, Sattur Unit, Dharwad instead of taking an inventory has deliberately with an *ulterior motive* refused to take an inventory duly stating that the aforesaid building has 5 Floors (GF+FF+SF+TF+FF) and thus power supply cannot be provided on the aforesaid grounds.
9. Being aggrieved by this the complainant approached several Authorities seeking remedial action and at the end, that is on 22.12.2022 the Respondent licensee issued a service work order.
10. The list of events is put forth before this Authority for kind perusal:

| Particulars | Events |
|---|---|
| Registration | 31.07.2021 |
| Power Sanction | 12.11.2021 |
| Supervision charges remitted on | 23.11.2021 |
| Work Order | 03.12.2021 |
| Electrical Inspectorate Approval | 19.08.2022 |
| Inventory submitted | 20.08.2022 |
| Preamble (Charging Letter) | 07.12.2022 |
| Service Work order | 22.12.2022 |

**GROUNDS**

1. That the Complainant herein claims the payment of compensation in terms of clause (b) of Sub Clause 9.1 of KERC (CGRF & OMBUDSMAN) (Amendment Regulations) 2007 vide Notification No. KERC/D/01/07 Bangalore Dated 30.05.2007.
2. That the Regulations governing this claim is said to be Karnataka Electricity Regulatory Commission (Standards of Performance) Regulations, 2022 and as per these Regulations Schedule-I at Sl.No.08 refers to "Application for new connection / additional load". As per this clause if the licensee does not release the supply where network expansion / enhancement is required for providing connection within 45 days after receipt of request, then the consumer is entitled for compensation of Rs 200/- for each day of delay.

.......4

3. That in terms of sub clause 3.2 of clause 3 of KERC (Duty of the licensee to supply Electricity on request) Regulations, 2004 and its amendments, Notified in Karnataka Gazette dated 21.10.2004, it is the obligatory duty of the licensee to provide the Low Tension (LT) electricity supply within 45 days where such supply requires extension of distribution mains.
4. That in terms of the aforesaid Notification it is the obligatory duty of the licensee to compensate the aggrieved person the amount as prescribed there under on account of delay.
5. That in terms of the Notification No. KERC/CoS/Tech/01/DDD/22-23/399, dated 01.07.2022 kind attention of this Authority is invited to page 4 of para 4 where the Hon'ble Commission has taken a view as under:
   *There is a universal obligation on the part of the distribution licensees to supply electricity on request, by the owner or the occupier of any premises on such terms & conditions as stipulated in the relevant provisions of the Electricity Act, 2003 and the Regulations framed there under. For curbing the unauthorized buildings, the concerned local bodies will have to take action under the respective enactments. The Electricity Act and the Regulations cannot be used for curbing violations under other laws. For curbing such activities, the concerned officials have to take proper actions as provided under different enactments. Providing an essential service to the consumer is more essential, as obligated under the Electricity Act 2003.*
   Such being the enactment the concerned licensee deliberately took the shelter of other enactments to fulfill their *ulterior motive* as more clearly described in para 4 **read with para 8 of this complaint.**
6. In view of the above it is hereby requested to kindly award us the charges as claimed above in terms of KERC (Standards of Performance) Regulations, 2022 towards physical, mental & emotional sufferings met by the complainant in the course of time.
7. The calculation is produced herewith for ready reference:

| **Power Sanction** | **Work Order** | **Inventory** | |
|---|---|---|---|
| 31 | 7 | 11 | |
| 30 | 3 | 30 | |
| 31 | | 31 | |
| 12 | | 30 | |
| | | 22 | |
| 104 | 10 | 114 | 228 |
| | Prescribed limitation period as per KERC SoP | | 45 |
| | | 183 days to compensate*200/- | 183 |
| | | **Total amount receivable in Rs** | **36600.00** |

## PRAYER

Therefore it is most humbly prayed that, this Hon'ble Authority may kindly be pleased to:

a. Call for Records.
b. To direct the Licensee to award charges in terms of KERC (Standards of Performance) Regulations, 2022.
c. Direct the head of HESCOM to take strict action against the Licensee individual for his willful disobedience.
d. Pass any other order as this Hon'ble Authority deems fit and proper in the nature and circumstances of the case, in the interest of justice and equity.

## ನಿಗಮದ ಪರವಾಗಿ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ) ಕಾ ಮತ್ತು ಪಾ ಶಹರ ಉಪ ವಿಭಾಗ-1, ಹೆಸ್ಕಾಂ, ಧಾರವಾಡ ಇವರ ಲಿಖಿತ ಹೇಳಿಕೆ.

ಶ್ರೀ ವೈಜೇಶ ಆರ್ ಉಚಿಲಾ ಇವರು ಸ್ಥಾವರ ಸಂಖ್ಯೆ:1900876163 ದಿನಾಂಕ:31-07-2021 ರಂದು ಧಾರವಾಡ ನಗರ ಉಪ ವಿಭಾಗ-1 ರಲ್ಲಿ ಅರ್ಜಿ ನೋಂದಣಿಯಾಗಿರುತ್ತದೆ. ಅಧೀಕ್ಷಕ ಅಭಿಯಂತರರು ಕಾ ಮತ್ತು ಪಾ ವೃತ್ತ ಹೆಸ್ಕಾಂ, ಹುಬ್ಬಳ್ಳಿರವರು ದಿನಾಂಕ:12--11-2021 ರಂದು ಶ್ರೀ ವೈಜೇಶ ಆರ್ ಉಚಿಲಾರವರ ಜಿ+3 ಸಂರಚನೆ ವಸತಿ ಕಟ್ಟಡದ 17 ಸ್ಥಾವರಕ್ಕೆ 60 ಕೆ.ವಿ. ವಿದ್ಯುತ್ ಮಂಜೂರಾತಿ ನೀಡಿರುತ್ತಾರೆ. ಗ್ರಾಹಕರು ದಿನಾಂಕ:23-11-2021 ರಂದು ಮೇಲ್ವಿಚಾರಣಾ ಶುಲ್ಕವನ್ನು ಸಂಧಾಯಿಸಿದ ಮೇಲೆ ಕಾರ್ಯನಿರ್ವಾಹಕ ಅಭಿಯಂತರರು ಕಾ & ಪಾ ಶಹರ ವಿಭಾಗ ಧಾರವಾಡರವರು ಕಟ್ಟಡದ 17 ಸ್ಥಾವರಕ್ಕೆ 60 ಕೆ.ವಿ. ವಿದ್ಯುತ್‌ನ್ನು ಸಯಂ ಕಾರ್ಯಗತ ಯೋಜನೆಯ ಅಡಿಯಲ್ಲಿ ಕಲ್ಪಿಸಲು ದಿನಾಂಕ:03-12-2021 ರಂದು ಷರತ್ತುಗಳೊಂದಿಗೆ (90 ದಿನಗಳಲ್ಲಿ ಕೆಲಸ ಮುಗಿಯತಕ್ಕದ್ದು) ವಿದ್ಯುತ್ ಪೂರೈಸುವ ಕೆಲಸ ಕೈಗೊಳ್ಳು ಅನುಮೊದನೆಯನ್ನು ನೀಡಿರುತ್ತಾರೆ.

ಗ್ರಾಹಕರು ವಿದ್ಯುತ್ ಸಮಗ್ರಿಗಳನ್ನು ಜುಲೈ 2022 ರಂದು ಖರಿಧೀಸಿ ಕಾಮಗಾರಿಯನ್ನು ದಿನಾಂಕ:15-8-2022 ರಂದು ಪೂರ್ಣಗೊಳಿಸಿದ್ದಾರೆ. ಗ್ರಾಹಕರು ಕೆಲಸವನ್ನು ಪೂರ್ಣಗೊಳಿಸಲು 258 ದಿನಗಳನ್ನು ತೆಗೆದುಕೊಂಡಿರುತ್ತಾರೆ ಮತ್ತು ವಿಳಂಬವಾದ ಬಗ್ಗೆ ಯಾವುದೇ ರೀತಿಯ ಅನುಮೋದನೆಯನ್ನು ಕಾರ್ಯನಿರ್ವಾಹಕ ಅಭಿಯಂತರರು ಕಾ & ಪಾ ಶಹರ ವಿಭಾಗ ಧಾರವಾಡರವರಿಂದ ಪಡೆಯದಿರುವುದಿಲ್ಲ. ಮುಂದುವರೆದು ಗ್ರಾಹಕರು ಎಚ್ ಡಿ ಎಮ್ ಸಿ ರವರಿಂದ ಕಟ್ಟಡಕ್ಕೆ ಜಿ+3 ಸಂರಚನೆಗೆ ಅನುಮೊದನೆ ಪಡೆದುಕೋಂಡಿರುತ್ತಾರೆ ಮತ್ತು ಅಧೀಕ್ಷಕ ಅಭಿಯಂತರರು ಕಾ & ಪಾ ವೃತ್ತ ಹೆಸ್ಕಾಂ ಹುಬ್ಬಳ್ಳಿರವರು ದಿನಾಂಕ:12-11-2021 ರಂದು ವಿದ್ಯುತ್ ಮಂಜುರಾತಿ ಜಿ+3 ಸಂರಚನೆ ವಸತಿ ಕಟ್ಟಡದ ನೀಡಿರುತ್ತಾರೆ. ಆದರೆ ಗ್ರಾಹಕರು ಜಿ+4 ಸಂರಚನೆಯ ಕಟ್ಟಡವನ್ನು ನಿರ್ಮಿಸಿದರಿಂದ ವಿದ್ಯುತ್ ಪರಿವಿಕ್ಷಕರ ಧಾರವಾಡರವರು ಕಟ್ಟಡಕ್ಕೆ ವಿದ್ಯುತ್ ಪೂರೈಸಲು ಶರತ್ತುಬದ್ದ ಅನುಮೋದನೆಯನ್ನು (ಕಟ್ಟಡದ ಜಿ+3 ಸ್ಥಾವರಗಳಿಗೆ ಮಾತ್ರ ವಿದ್ಯುತ್ ಸರಬರಾಜು ಮಾಡಲು ಸುರಕ್ಷತಾ ಅನುಮೊದನೆಯನ್ನು) ದಿನಾಂಕ:19-08-2022 ರಲ್ಲಿ ನೀಡಿರುತ್ತಾರೆ.

ವಿದ್ಯುತ್ ಸರಬರಾಜು ಷರತ್ತು 4.1 ಪ್ರಕಾರ ನಿಗದಿಪಡಿಸಿದ ವಿದ್ಯುತ್ ಪೂರೈಕೆಯ ಸಮಯದ ಚೌಕಟ್ಟನ್ನು ಅನುಸರಿಸಲು ವಿಫಲರಾದ ವಿತರಣಾ ಪರವಾನಿಗೆದಾರರು(ಹೆಸ್ಕಾಂ) ಕೆಇಆರ್‌ಸಿ (ಪರವಾನಿಗೆದಾರರ ಕಾರ್ಯಕ್ಷಮತೆಯ ಮಾನದಂಡಗಳು) ನಿಯಮಾವಳಿಗಳಲ್ಲಿ ನಿರ್ದಿಷ್ಟಪಡಿಸಿದ ಮೊತ್ತವನ್ನು ಅರ್ಜಿದಾರರಿಗೆ ಪಾವತಿಸಲು ಜವಾಬ್ದಾರರಾಗಿರುತ್ತಾರೆ. ವಿದ್ಯುತ್ ಪೂರೈಕೆಗಾಗಿ ಅರ್ಜಿದಾರರ ಸ್ವೀಕೃತಿಯ ಮೇಲೆ ವಿತರಣಾ ಪರವಾನಿಗೆ ಪತ್ರವನ್ನು ವಿತರಿಸಿದಾಗ ಮತ್ತು ಅರ್ಜಿದಾರರು ವಿದ್ಯುತ್ ಸರಬರಾಜು ಷರತ್ತು 3 ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಸಮಯಕ್ಕೆ ವಿದ್ಯುತ್ ಪೂರೈಕೆಯನ್ನು ಪಡೆಯಲು ವಿಫಲವಾದರೆ, ಮೊತ್ತವನ್ನು ಪಾವತಿಸಲು ಪರವಾನಿಗೆದಾರರ(ಹೆಸ್ಕಾಂ) ಜವಾಬ್ದಾರಿಯು ನಿಲ್ಲುತ್ತದೆ ಮತ್ತು ಅರ್ಜಿಯನ್ನು ರದ್ದುಗೊಳಿಸಲಾಗಿದೆ ಎಂದು ಪರಿಗಣಿಸಲಾಗುತ್ತದೆ. ಗ್ರಾಹಕರು ನಿರ್ಧಿಷ್ಟ ಸಮಯದ ಒಳಗೆ ಕಟ್ಟಡದ ಜಿ+4 ಸಂರಚನೆಗೆ ವಿದ್ಯುತ್ ಪರಿವೀಕ್ಷಕರ ಅನುಮೊದನೆಯನ್ನು ಪಡೆದುಕೊಂಡಿರುವುದಿಲ್ಲಾ ಆದ್ದರಿಂದ ಮೊತ್ತವನ್ನು ಪಾವತಿಸಲು ಪರವಾನಿಗೆದಾರರ(ಹೆಸ್ಕಾಂ) ಜವಾಬ್ದಾರಿ ನಿಲ್ಲುತ್ತದೆ.

ಮುಂದುವರೆದು ವಿದ್ಯುತ್ ಪರಿವಿಕ್ಷಕರ ಧಾರವಾಡರವರಿಗೆ ಷರತ್ತುಗಳ ಸ್ಪಷ್ಟನೆಯನ್ನು ಕೋರಿ ದಿನಾಂಕ:03-11-2022 ರಂದು ನಮ್ಮ ಕಛೇರಿಯಿಂದ ಪತ್ರ ಸಲ್ಲಿಸಲಾಗಿರುತ್ತದೆ. ವಿದ್ಯುತ್ ಪರಿವಿಕ್ಷಕರು ದಿನಾಂಕ:8-11-2022 ರಂದು ನಮ್ಮ ಹಂತದಲ್ಲಿಯೆ ಕಟ್ಟಡಕ್ಕೆ ವಿದ್ಯುತ್ ಪೂರೈಸಲು ನಿರ್ಧಾರ ತಗೆದುಕೋಳ್ಳಲು ಸೂಚಿಸಿರುತ್ತಾರೆ. ಆದ್ದರಿಂದ ಶಾಖಾಧಿಕಾರಿ ಸತ್ತೂರವರಿಗೆ ಜಾಯಿಂಟ ಇನ್‌ವೆಂಟ್ರಿಯನ್ನು ಉಪ ವಿಭಾಗಕ್ಕೆ ಸಲ್ಲಿಸಲು ಮತ್ತು ಕಟ್ಟಡದ ನಾಲ್ಕನೇ ಅಂತಸ್ತಿಗೆ ಹೆಚ್ ಡಿ ಎಂ ಸಿ ಅವರದಿಂದ ಅನುಮೊದನೆ ಇಲ್ಲದ ಕಾರಣ ಗ್ರಾಹಕರಿಗೆ ಇಂಡಿಮಿನಿಟಿ ಬಾಂಡ್ ಸಲ್ಲಿಸಲು ಸೂಚಿಸಲಾಗಿತ್ತು.

ಶಾಖಾಧಿಕಾರಿ ಸತ್ತೂರವರು 18/11/2022 ರಂದು ಉಪ ವಿಭಾಗಕ್ಕೆ ಜಾಯಿಂಟ್ ಇನ್‌ವೆಂಟ್ರಿಯನ್ನು ಸಲ್ಲಿಸಿರುತ್ತಾರೆ ಹಾಗೂ ಗ್ರಾಹಕರು 25/11/22 ರಂದು ಇಂಡೆಮ್‌ನಿಟಿಬಾಂಡ್ ಸಲ್ಲಿಸಿರುತ್ತಾರೆ. ಜೈಂಟ್ ಇನ್‌ವೆಂಟ್ರಿಯನ್ನು ಹಾಗೂ ಇಂಡೆಮ್‌ನಿಟಿಬಾಂಡ್‌ನ್ನು ವಿಭಾಗ ಕಚೇರಿಗೆ 01-12-2022 ರಂದು ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿರುತ್ತದೆ. ವಿಭಾಗ ಕಚೇರಿಯಿಂದ 07-12-2022 ರಂದು preamble ಆದ ಮೇಲೆ ಕಟ್ಟಡದ ವೈಯುಕ್ತಿಕ ಮನೆಗಳಿಗೆ ಗ್ರಾಹಕರು 08-12-2022 ರಂದು ನೊಂದಣಿ ಮಾಡಿರುತ್ತಾರೆ ಪವರ್ ಸ್ಯಾಂಕ್ಷನ್‌ವನ್ನು 15-12-2022 ರಂದು ನೀಡಿದ್ದು, ಗ್ರಾಹಕರು 22-12-2022 ರಂದು ಡಿಪೋಸಿಟ್ ಮೊತ್ತವನ್ನು ತುಂಬಿರುತ್ತಾರೆ. ಮುಂದುವರೆದು 22-12-2022 ರಂದು ಕಾ & ಪಾ ಶಹರ ಉಪ ವಿಭಾಗ-1 ಧಾರವಾಡದಲ್ಲಿ ವೈಯುಕ್ತಿಕ ಮನೆಗಳೀಗೆ ಕೆಲಸದ ಆದೇಶ ಹಾಕಿರುತ್ತೇವೆ.

.......6

ಮುಂದುವರೆದು ಗ್ರಾಹಕರು ಕೆ.ಇ.ಆರ್.ಸಿ. 10 ನೇ ತಿದ್ದುಪಡಿ ಪ್ರಕರಾರ ಅನಧಿಕೃತ ಕಟ್ಟಡಗಳಿಗೆ **ಕಡಿವಾಣ ಹಾಕಲು** ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳು ಆಯಾ ಕಾಯ್ದೆಗಳ ಅಡಿಯಲ್ಲಿ ಕ್ರಮ ತೆಗೆದುಕೊಳ್ಳಬೇಕು ಮತ್ತು ಅನಧಿಕೃತ ಕಟ್ಟಡಗಳಿಗೆ ವಿದ್ಯುತ್ ಸರಬರಾಜು ಮಾಡಬೇಕು ಎಂದು ಹೇಳಿರುತ್ತಾರೆ. ಆದರೆ **ಕೆ.ಇ.ಆರ್.ಸಿ 10 ನೇ ತಿದ್ದುಪಡಿ ಪ್ರಕಾರ ಅನಧಿಕೃತ ಕಟ್ಟಡಗಳಿಗೆ ವಿದ್ಯುತ್ ಪರಿವೀಕ್ಷಕರ ಅನುಮೋದನೆಯನ್ನು ಪಡೆದ ವಿದ್ಯುತ್ ಸರಬರಾಜು ಮಾಡಬೇಕೆಂದು ಷರತ್ತು ಇರುತ್ತದೆ.** ಗ್ರಾಹಕರು ಎಚ್.ಎಮ್.ಸಿ.ರವರಿಂದ ಕಟ್ಟಡಕ್ಕೆ ಜಿ+3 ಸಂರಚನೆಗೆ ಅನುಮೋದನೆ ಪಡೆದುಕೊಂಡು **ಅನಧಿಕೃತವಾಗಿ ಜಿ+4 ಸಂರಚನೆಯ ಕಟ್ಟಡವನ್ನು** ನಿರ್ಮಿಸಿದ್ದರಿಂದ ಮತ್ತು ಜಿ+4 ಸಂರಚನೆಗೆ ವಿದ್ಯುತ್ ಪರಿವೀಕ್ಷಕರ ಅನುಮೋದನೆ ಇಲ್ಲದಿರುವ ಕಾರಣ ಮತ್ತು ಅಧಿಕ್ಷಕ ಇಂಜಿನೀಯರ(ವಿ)ರವರು ಕಟ್ಟಡದ ಜಿ+3 ಸಂರಚನೆಗೆ ಮಂಜುರಾತಿ ನೀಡಿದ್ದರಿಂದ ಗ್ರಾಹಕರಿಗೆ ವಿದ್ಯುತ್ ಸರಬರಾಜು ಮಾಡಲು ವಿಳಂಭವಾಗಿರುತ್ತದೆ. ಇದರಲ್ಲಿ ಯಾವುದೇ ವೈಯುಕ್ತಿಕ ಕಾರಣ ಇರುವುದಿಲ್ಲ.

## ಪ್ರಕರಣದ ಸಾರಾಂಶದ ಮೇಲೆ ವೇದಿಕೆಯ ಅಭಿಪ್ರಾಯ:

ಸದರ ಪ್ರಕರಣದಲ್ಲಿ ಗ್ರಾಹಕರ ಹೇಳಿಕೆ ಹಾಗೂ ನಿಗಮದ ಅಧಿಕಾರಿಗಳ ಹೇಳಿಕೆ ಮತ್ತು ಕಡತದಲ್ಲಿಯ ಕಾಗದ ಪತ್ರಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ಮಾಹಿತಿ ಕಂಡು ಬರುತ್ತದೆ.

1. D.No-1900876163, ಶ್ರೀ ವೈಜೇಶ ಆರ್ ಉಚಿಲಾ, ಅನಂತ ಲೇಔಟ್, ಪಿ.ಬಿ. ರೋಡ, ನವಲೂರ ಧಾರವಾಡ ಇವರ ಬಹುಮಹಡಿ ಕಟ್ಟಡಕ್ಕೆ 60 ಕಿ.ವ್ಯಾ ವಿದ್ಯುತ್ ಮಂಜೂರಾತಿಯೊಂದಿಗೆ 17 ಸ್ಥಾವರಗಳಿಗೆ ವಿದ್ಯುತ್ ಮಂಜೂರಾತಿಯನ್ನು ಪಡೆದಿದ್ದು, ಲೈಸನ್ಸುದಾರರು ಸದರಿ ಬಹುಮಡಿ ಕಟ್ಟಡದ 4 ನೇ ಅಂತಸ್ಥಿಗೆ ವಿದ್ಯುತ್ ಸಬರಾಜು ಮಾಡಿರುವುದಿಲ್ಲವೆಂದು ಹಾಗೂ ಸದರಿ ವಿದ್ಯುತ್ ಸರಬರಾಜು ಮಾಡಲು ವಿಳಂಭವಾದ 183 ದಿನಗಳಿಗೆ KERC (Standards of Performance) Regulations, 2022 ರಂತೆ ರೂ.36,600/-ಗಳ ಸತ್ಪಾಂನ ಮೊತ್ತವನ್ನು ಗ್ರಾಹಕರಿಗೆ ಪಾವತಿಸುವಂತೆ ಹಾಗೂ ಲೈಸನ್ಸುದಾರರ ಮೇಲೆ ಕಠಿಣ ಕ್ರಮ ಜರುಗಿಸಿ, ನ್ಯಾಯಯುತ ಆದೇಶವನ್ನು ನೀಡಬೇಕೆಂದು ಗ್ರಾಹಕರ ಪರವಾಗಿ ಶ್ರೀ ತುಷಾರ ಎಂ ಬದ್ದಿರವರು ದಿನಾಂಕ:13-01-2023 ರಂದು ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆಗೆ 'ಎ' ನಮೂನೆಯೊಂದಿಗೆ ಅರ್ಜಿ ಸಲ್ಲಿಸಿರುವುದು ಕಂಡು ಬರುತ್ತದೆ.
2. ಶ್ರೀ ವೈಜೇಶ ಆರ್ ಉಚಿಲಾ, ಇವರು ಸ್ಥಾವರದ I.D.No-1900876163 ದಿನಾಂಕ:31-07-2021 ರಂದು ಬಹುಮಹಡಿ ಕಟ್ಟಡಕ್ಕೆ ವಿದ್ಯುತ್ ಮಂಜೂರಾತಿಗೆ ಕಾ ಮತ್ತು ಪಾ ಶಹರ ಉಪ ವಿಭಾಗ-1 ರಲ್ಲಿ ಅರ್ಜಿ ನೊಂದಾಯಿಸಿದ್ದು, ಎಚ್ ಡಿ ಎಮ್ ಸಿ ರವರಿಂದ ಕಟ್ಟಡಕ್ಕೆ ಜಿ+3 ಸಂರಚನೆಗೆ ಅನುಮೊದನೆ ಪಡೆದುಕೊಂಡಿರುವ ಪ್ರಕಾರ ಅಧೀಕ್ಷಕ ಇಂಜಿನೀಯರ(ವಿ), ಕಾ ಮತ್ತು ಪಾ ವೃತ್ತ ಹೆಸ್ಕಾಂ, ಹುಬ್ಬಳ್ಳಿರವರು ಶ್ರೀ ವೈಜೇಶ ಆರ್ ಉಚಿಲಾರವರ ಜಿ+3 ಸಂರಚನೆಯ ವಸತಿ ಕಟ್ಟಡಕ್ಕೆ 17 ಸ್ಥಾವರಗಳಿಗೆ 60 ಕೆ.ವಿ.ಎ ವಿದ್ಯುತ್ ಮಂಜೂರಾತಿಯನ್ನು ನೀಡಿರುತ್ತಾರೆ. ಗ್ರಾಹಕರು ವಿದ್ಯುತ್ ಸಮಗ್ರಿಗಳನ್ನು ಜುಲೈ 2022 ರಂದು ಖರಿಧೀಸಿ ಕಾಮಗಾರಿಯನ್ನು ದಿನಾಂಕ:15-8-2022 ರಂದು ಪೂರ್ಣಗೊಳಿಸಿದ್ದಾರೆ. ಆದರೆ ಗ್ರಾಹಕರು ಜಿ+4 ಸಂರಚನೆಯ ಕಟ್ಟಡವನ್ನು ನಿರ್ಮಿಸಿದರಿಂದ ವಿದ್ಯುತ್ ಪರಿವಿಕ್ಷಕರ ಧಾರವಾಡರವರು ಕಟ್ಟಡಕ್ಕೆ ವಿದ್ಯುತ್ ಪೂರೈಸಲು ಶರತ್ತುಬದ್ದ ಅನುಮೋದನೆಯನ್ನು (ಕಟ್ಟಡದ ಜಿ+3 ಸ್ಥಾವರಗಳಿಗೆ ಮಾತ್ರ ವಿದ್ಯುತ್ ಸರಬರಾಜು ಮಾಡಲು ಸುರಕ್ಷಾ ಅನುಮೊದನೆಯನ್ನು) ದಿನಾಂಕ:19-08-2022 ರಲ್ಲಿ ನೀಡಿರುತ್ತಾರೆ. ವಿದ್ಯುತ್ ಪರಿವಿಕ್ಷಕರ ಧಾರವಾಡರವರಿಗೆ ಷರತ್ತುಗಳ ಸ್ಪಷ್ಟನೆಯನ್ನು ಕೋರಿ ದಿನಾಂಕ:03-11-2022 ರಂದು ನಮ್ಮ ಕಛೇರಿಯಿಂದ ಪತ್ರ ಸಲ್ಲಿಸಲಾಗಿರುತ್ತದೆ. ವಿದ್ಯುತ್ ಪರಿವಿಕ್ಷಕರು ದಿನಾಂಕ:8-11-2022 ರಂದು ನಮ್ಮ ಹಂತದಲ್ಲಿಯೆ ಕಟ್ಟಡಕ್ಕೆ ವಿದ್ಯುತ್ ಪೂರೈಸಲು ನಿರ್ಧಾರ ತಗೆದುಕೋಳ್ಳಲು ಸೂಚಿಸಿರುತ್ತಾರೆ. ಆದ್ದರಿಂದ ಶಾಖಾಧಿಕಾರಿ ಸತ್ತೂರವರಿಗೆ ಜಾಯಿಂಟ ಇನ್‌ವೆಂಟ್ರಿಯನ್ನು ಉಪ ವಿಭಾಗಕ್ಕೆ ಸಲ್ಲಿಸಲು ಮತ್ತು ಕಟ್ಟಡದ ನಾಲ್ಕನೇ ಅಂತಸ್ತಿಗೆ ಹೆಚ್ ಡಿ ಎಂ ಸಿ ಅವರದಿಂದ ಅನುಮೊದನೆ ಇಲ್ಲದ ಕಾರಣ ಗ್ರಾಹಕರಿಗೆ ಇಂಡಿಮಿನಿಟಿ ಬಾಂಡ್ ಸಲ್ಲಿಸಲು ಲೈಸನ್ಸುದಾರರು ಗ್ರಾಹಕರಿಗೆ ಸೂಚಿಸಿರುವುದು ಕಂಡು ಬರುತ್ತದೆ.

.......7

3. ಕಾ ಮತ್ತು ಪಾ ನಗರ ವಿಭಾಗ ಧಾರವಾಡರವರ ಕಚೇರಿಯಿಂದ 07-12-2022 ರಂದು preamble ಆದ ಮೇಲೆ ಕಟ್ಟಡದ ವೈಯುಕ್ತಿಕ ಮನೆಗಳಿಗೆ ಗ್ರಾಹಕರು 08-12-2022 ರಂದು ನೊಂದಣಿ ಮಾಡಿರುತ್ತಾರೆ ಪವರ್ ಸ್ಯಾಂಕ್ಷನ್‌ವನ್ನು 15-12-2022 ರಂದು ನೀಡಿದ್ದು, ಗ್ರಾಹಕರು 22-12-2022 ರಂದು ಡಿಪೋಜಿಟ್ ಮೊತ್ತವನ್ನು ಪಾವತಿಸಿರುತ್ತಾರೆ. ಮುಂದುವರೆದು 22-12-2022 ರಂದು ಕಾ & ಪಾ ಶಹರ ಉಪ ವಿಭಾಗ-1 ಧಾರವಾಡದಲ್ಲಿ ವೈಯುಕ್ತಿಕ ಮನೆಗಳಿಗೆ ಕೆಲಸದ ಆದೇಶ ಹಾಕಿರುತ್ತಾರೆ. ಗ್ರಾಹಕರು ಕೆ.ಇ.ಆರ್.ಸಿ. 10 ನೇ ತಿದ್ದುಪಡಿ ಪ್ರಕರಾರ ಅನಧಿಕೃತ ಕಟ್ಟಡಗಳಿಗೆ ಕಡಿವಾಣ ಹಾಕಲು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳು ಆಯಾ ಕಾಯ್ದೆಗಳ ಅಡಿಯಲ್ಲಿ ಕ್ರಮ ತೆಗೆದುಕೊಳ್ಳಬೇಕು ಮತ್ತು ಅನಧಿಕೃತ ಕಟ್ಟಡಗಳಿಗೆ ವಿದ್ಯುತ್ ಸರಬರಾಜು ಮಾಡಬೇಕು ಎಂದು ಹೇಳಿರುತ್ತಾರೆ. ಆದರೆ **ಕೆ.ಇ.ಆರ್.ಸಿ 10 ನೇ ತಿದ್ದುಪಡಿ ಪ್ರಕಾರ ಅನಧಿಕೃತ ಕಟ್ಟಡಗಳಿಗೆ ವಿದ್ಯುತ್ ಪರಿವೀಕ್ಷಕರ ಅನುಮೊದನೆಯನ್ನು ಪಡೆದು ವಿದ್ಯುತ್ ಸರಬರಾಜು ಮಾಡಬೇಕೆಂದು ಷರತ್ತು ಇರುತ್ತದೆ.** ಗ್ರಾಹಕರು ಎಚ್.ಎಮ್.ಸಿ.ರವರಿಂದ ಕಟ್ಟಡಕ್ಕೆ ಜಿ+3 ಸಂರಚನೆಗೆ ಅನುಮೊದನೆ ಪಡೆದುಕೊಂಡು ಅನಧಿಕೃತವಾಗಿ ಜಿ+4 ಸಂರಚನೆಯ ಕಟ್ಟಡವನ್ನು ನಿರ್ಮಿಸಿದ್ದರಿಂದ ಮತ್ತು ಜಿ+4 ಸಂರಚನೆಗೆ ವಿದ್ಯುತ್ ಪರಿವೀಕ್ಷಕರ ಅನುಮೊದನೆ ಇಲ್ಲದಿರುವ ಕಾರಣ ಮತ್ತು ಅಧಿಕ್ಷಕ ಇಂಜಿನೀಯರ(ವಿ)ರವರು ಕಟ್ಟಡದ ಜಿ+3 ಸಂರಚನೆಗೆ ಮಂಜುರಾತಿ ನೀಡಿದ್ದರಿಂದ ಗ್ರಾಹಕರಿಗೆ ವಿದ್ಯುತ್ ಸರಬರಾಜು ಮಾಡಲು ವಿಳಂಭವಾಗಿರುತ್ತದೆ. ಇದರಲ್ಲಿ ಯಾವುದೇ ವೈಯುಕ್ತಿಕ ಕಾರಣ ಇರುವುದಿಲ್ಲವೆಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾ ಮತ್ತು ಪಾ ಶಹರ ಉಪ ವಿಭಾಗ-2 ಹೆಸ್ಕಾಂ, ಧಾರವಾಡರವರು ದಿನಾಂಕ:10-02-2023 ರಲ್ಲಿ ವೇದಿಕೆಗೆ ವಿನಂತಿಸಿಕೊಂಡಿರುವುದು ಕಂಡು ಬರುತ್ತದೆ.

ಮೇಲಿನ ಎಲ್ಲ ಅಂಶಗಳನ್ನು ಪರಿಶೀಲಿಸಲಾಗಿ, ಸದರಿ ಪ್ರಕರಣದಲ್ಲಿ ಗ್ರಾಹಕರ ಬಹುಮಹಡಿ ಕಟ್ಟಡಕ್ಕೆ ಎಚ್.ಡಿ.ಎಮ್.ಸಿ ಇವರಿಂದ ಜಿ+3 ಸಂರಚನೆಯ ವಸತಿ ಕಟ್ಟಡದ ನಿರ್ಮಾಣಕ್ಕೆ ಅನುಮೊದನೆ ಪಡೆದುಕೊಂಡು ಜಿ+4 ಸಂರಚನೆಯ ವಸತಿ ಕಟ್ಟಡವನ್ನು ನಿರ್ಮಾಣ ಮಾಡಿಕೊಂಡಿದ್ದಿರುತ್ತದೆ. ಅಧೀಕ್ಷಕ ಇಂಜಿನೀಯರ(ವಿ), ಕಾ ಮತ್ತು ಪಾ ವೃತ್ತ ಹೆಸ್ಕಾಂ, ಹುಬ್ಬಳ್ಳಿರವರು ಕಟ್ಟಡದ 17 ಸ್ಥಾವರಕ್ಕೆ 60 ಕೆ.ವಿ. ವಿದ್ಯುತ್‌ನ್ನು ಸ್ವಯಂ ಕಾರ್ಯಗತ ಯೋಜನೆಯ ಅಡಿಯಲ್ಲಿ ಕಲ್ಪಿಸಲು ದಿನಾಂಕ:03-12-2021 ರಂದು ಷರತ್ತುಗಳೊಂದಿಗೆ ವಿದ್ಯುತ್ ಪೂರೈಸಲು ಜಿ+3 ಸಂರಚನೆಯ ವಸತಿ ಕಟ್ಟಡದ 17 ಸ್ಥಾವರಗಳಿಗೆ 60 ಕೆ.ವಿ.ಎ ವಿದ್ಯುತ್ ಮಂಜೂರಾತಿಯನ್ನು ನೀಡಿದ್ದಿರುತ್ತದೆ. ಗ್ರಾಹಕರು ವಿದ್ಯುತ್ ಸಾಮಗ್ರಿಗಳನ್ನು ಜುಲೈ 2022 ರಂದು ಖರಿಧೀಸಿ, ಕಾಮಗಾರಿಯನ್ನು ದಿನಾಂಕ:15-08-2022 ರಂದು ಪೂರ್ಣಗೊಳಿಸಿದ್ದಾರೆ. ಗ್ರಾಹಕರು ಕೆಲಸವನ್ನು ಪೂರ್ಣಗೊಳಿಸಲು 258 ದಿನಗಳನ್ನು ತೆಗೆದುಕೊಂಡಿರುತ್ತಾರೆ.

ವಿದ್ಯುತ್ ಪರಿವಿಕ್ಷಕರ ಧಾರವಾಡರವರಿಗೆ ಷರತ್ತುಗಳ ಸ್ಪಷ್ಟನೆಯಮ್ನು ಕೋರಿ ದಿನಾಂಕ:03-11-2022 ರಂದು ಲೈಸನ್ಸುದಾರರು ಪತ್ರ ಬರೆದಿದ್ದು, ವಿದ್ಯುತ್ ಪರಿವಿಕ್ಷಕರು ದಿನಾಂಕ:08-11-2022 ರಂದು ತಮ್ಮ ಹಂತದಲ್ಲಿಯೆ ಕಟ್ಟಡಕ್ಕೆ ವಿದ್ಯುತ್ ಪೂರೈಸಲು ನಿರ್ಧಾರ ತಗೆದುಕೋಳ್ಳಲು ಸೂಚಿಸಿರುವುದರಿಂದ ಕಟ್ಟಡದ ನಾಲ್ಕನೇ ಅಂತಸ್ತಿಗೆ ಹೆಚ್.ಡಿ.ಎಂ.ಸಿ ಅವರದಿಂದ ಅನುಮೊದನೆ ಇಲ್ಲದ ಕಾರಣ ಗ್ರಾಹಕರಿಂದ ಇಂಡಿಮಿನಿಟಿ ಬಾಂಡನ್ನು ದಿ:25-11-2022 ರಲ್ಲಿ ಪಡೆದುಕೊಂಡು. ಜ್ವೈಂಟ್ ಇನ್‌ವೆಂಟ್ರಿಯನ್ನು ಹಾಗೂ ಇಂಡೆಮ್‌ನಿಟಿಬಾಂಡ್‌ನ್ನು ವಿಭಾಗ ಕಚೇರಿಗೆ ದಿ:01-12-2022 ರಂದು ಸಲ್ಲಿಸಲಾಗಿದ್ದಿರುತ್ತದೆ. ವಿಭಾಗ ಕಚೇರಿಯಿಂದ 07-12-2022 ರಂದು preamble ಆದ ಮೇಲೆ ಕಟ್ಟಡದ ವೈಯುಕ್ತಿಕ ಮನೆಗಳಿಗೆ ಗ್ರಾಹಕರು ದಿನಾಂಕ:08-12-2022 ರಂದು ನೊಂದಣಿ ಮಾಡಿರುತ್ತಾರೆ. ಪವರ್ ಸ್ಯಾಂಕ್ಷನ್‌ವನ್ನು ದಿನಾಂಕ:15-12-2022 ರಂದು ನೀಡಿ, ಗ್ರಾಹಕರಿಂದ ದಿನಾಂಕ:22-12-2022 ರಂದು ಡಿಪೋಸಿಟ್ ಮೊತ್ತವನ್ನು ಪಾವತಿಸಿಕೊಂಡು ದಿನಾಂಕ:22-12-2022 ರಂದು ವೈಯುಕ್ತಿಕ ಮನೆಗಳಿಗೆ ವಿದ್ಯುತ್ ಸರಬರಾಜು ಮಾಡಿದ್ದಿರುತ್ತದೆ.

......8

ಆದ್ದರಿಂದ ಸದರಿ ಪ್ರಕರಣದಲ್ಲಿ ಲೈಸನ್ಸುದಾರರು ಸದರಿ ವಸತಿ ಬಹುಮಡಿ ಕಟ್ಟಡಕ್ಕೆ ವಿದ್ಯುತ್ ಸರಬರಾಜು ಮಾಡುವಲ್ಲಿ ಯಾವುದೇ ಉದ್ದೇಶ ಪೂರ್ವಕವಾಗಿ ವಿಳಂಭಮಾಡಿರುವುದಿಲ್ಲ ಆದ್ದರಿಂದ ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

28 MAR 2023

**ಆದೇಶ ಸಂಖ್ಯೆ:ಅಇಂ(ವಿ)/ಉಲೆನಿ/ಹಿಸ-1/ಗ್ರಾಕುಂಕೊನಿವೇ/ಕಡತ-270/2023/** CYS-1305 **ದಿನಾಂಕ:**

ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಗೆ ಆದೇಶ ಸಂಖ್ಯೆ: ಹೆಸ್ಕಾಂ/ಜಿಎಂ(ಟಿ)/ಇಇ-4/ಏಓ/ 13-14/ಸಿವೈಎಸ್-769 ದಿ:06-07-2013 ರನ್ವಯ ಹಾಗೂ ಹೆಸ್ಕಾಂ/ಜಿಎಂ(ಟಿ)/ಇಇ-4/ಏಓ/ 19-20/ಸಿವೈಎಸ್-5493 ದಿ.12.03.2020 ಮತ್ತು HESCOM/DF/CA/DCA/AO(RA)/2021-22/CYS-6004 Date:18-02-2022 ರನ್ವಯ ದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ.

1. ಗ್ರಾಹಕರ ಮನವಿಯನ್ನು ಪುರಸ್ಕರಿಸಲಾಗಿಲ್ಲ.

**(ರೇವಣಸಿದ್ದಪ್ಪ ಗವಣ್ಣವರ)**
ಉಪಲೆಕ್ಕ ನಿಯಂತ್ರಣಾಧಿಕಾರಿ
ಹಾಗೂ ಗ್ರಾಕುಂಕೊನಿವೇ ಸದಸ್ಯರು
ಕಾ ಮತ್ತು ಪಾ ವೃತ್ತ, ಹುಬ್ಬಳ್ಳಿ

**(ಶ್ರೀಮತಿಲೀಲಾ ಆರ್ ಹಿರೇಮಠ)**
ಆಯೋಗದಿಂದ ನಿಯೋಜಿಸಲಾ
ಸದಸ್ಯರು.

**(ಶ್ರೀಮತಿ ಶರಣಮ್ಮ ಎಸ್ ಜಂಗಿನ)**
ಅಧೀಕ್ಷಕ ಇಂಜಿನೀಯರ(ವಿ)
ಕಾ & ಪಾ ವಲಯ ಕಚೇರಿ, ಹೆಸ್ಕಾಂ, ಹುಬ್ಬಳ್ಳಿ
ಹಾಗೂ ಅಧ್ಯಕ್ಷರು, ಧಾರವಾಡ ಜಿಲ್ಲೆ
ಗ್ರಾ.ಕುಂ.ಕೊ.ನಿ.ವೇದಿಕೆ.

ಗೆ,

**ಶ್ರೀ ವೈಜೇಶ ಆರ್ ಉಚಿಲಾ,**
[I.D. No :1900876163]
C/o ತುಷಾರ ಎಂ ಬದ್ದಿ,
ಅರಿಹಂತ ಪಾರ್ಕ,
ಕೆಶ್ವಾಪೂರ ಹುಬ್ಬಳ್ಳಿ-580023.

**"ನೊಂದಣಿ ಅಂಚೆ ಮೂಲಕ"**

**ಪ್ರತಿ:**

1. ಮುಖ್ಯ ಇಂಜಿನೀಯರ(ವಿ), ಹುಬ್ಬಳ್ಳಿ ವಲಯ, ಹುವಿಸಕಂನಿ., ಕೇಶ್ವಾಪುರ, ಹುಬ್ಬಳ್ಳಿ-23 ಇವರ ದಯಾಪರ ಮಾಹಿತಿಗಾಗಿ.
2. ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ಕಂಪನಿ ಕಛೇರಿ, ಹುವಿಸಕಂನಿ, ಹುಬ್ಬಳ್ಳಿರವರ ಆದರ ಪೂರ್ವಕ ಮಾಹಿತಿಗಾಗಿ
3. ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾ ಮತ್ತು ಪಾ ನಗರ ವಿಭಾಗ, ಹುವಿಸಕಂನಿ., ಧಾರವಾಡ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
4. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾ ಮತ್ತು ಪಾ ಶಹರ ಉಪ ವಿಭಾಗ-1, ಹುವಿಸಕಂನಿ., ಧಾರವಾಡರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ. **[ನೊಂದಾಯಿತ ಅಂಚೆ ಮೂಲಕ]**
5. ಮಹಾ ಕಡತ.